**ಸಾಕ್ಷಿಯನ್ನು ದಿಃ 04.08.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

1. ವಾದಿಯು ಸೆಟ್ ಬ್ಯಾಕ್ ಬಿಡದೇ ಕಟ್ಟಿರುವ ಜಾಗವನ್ನು ಒಡೆದು ಹಾಕುವಂತೆ ಕೋರಿ ಈ ದಾವೆ ಹಾಕಲಾಗಿದೆ.

2. ನಮ್ಮ ಸ್ವತ್ತಿನ ದಕ್ಷಿಣ ಭಾಗದಲ್ಲಿ ಸದರಿ ಸೆಟ್ ಬ್ಯಾಕ್ ಬಿಡದೇ ಕಟ್ಟಿರುತ್ತಾರೆ.

3. ದಾವಾ ಸ್ವತ್ತನ್ನು ನಾನು ಖರೀದಿ ಮಾಡಿರುತ್ತೇನೆ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ.

4. ಪ್ರತಿವಾದಿ ಯಾವ ದಿನಾಂಕಂದು ಮನೆ ಕಟ್ಟಲು ಪ್ರಾರಂಭಿಸಿರುತ್ತಾರೆ ಎಂದರೆ, ದಿಃ 16.05.2022 ಕ್ಕಿಂತ 2 ತಿಂಗಳು ಮುಂಚೆ ಕಟ್ಟಲು ಶುರು ಮಾಡಿದ್ದರು.

5. ನನ್ನದು ಹಾಗೂ ಪ್ರತಿವಾದಿ ಅಕ್ಕಪಕ್ಕದ ನಿವೇಶನ ಎಂದರೆ ಸರಿ.

6. ಯಾವುದೇ ಕಟ್ಟಡ ಕಟ್ಟಬೇಕಾದರೆ, ಮೊದಲು ಪಾಯ ತೆಗೆದು ನಂತರ ಪಿಲ್ಲರ್ ಹಾಕಿದ ನಂತರ ಕಟ್ಟಡ ಕಟ್ಟುತ್ತಾರೆ ಎಂದರೆ ಸರಿ.

7. ಪ್ರತಿವಾದಿ ಪಾಯ ತೆಗೆಸುವಾಗ ನೀವು ಅವರನ್ನು ಕೇಳಿದ್ದಿರಾ ಎಂದರೆ, ಕೇಳಿರುತ್ತೇನೆ. ಸದರಿ ವಿಚಾರವನ್ನು ನನ್ನ ವಾದಪತ್ರದಲ್ಲಿ ಬರೆಸಿರುತ್ತೇನೆ. ಆ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿಲ್ಲ. ಪಂಚಾಯತಿಗೆ ದೂರು ನೀಡಿದ್ದೀರಾ ಎಂದರೆ, ನೀಡಿದ್ದೇನೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ

8. ನೀವು ಪಂಚಾಯತಿಗೆ ದೂರು ಕೊಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

9. ನಾನು ಸಾತಪ್ಪನ್ ರವರಿಂದ ನಿವೇಶನ ಖರೀದಿ ಮಾಡಿರುತ್ತೇನೆ.

10. ನಾನು ಈಗ ದಿಂಡಗಾಡು ಗ್ರಾಮದಲ್ಲಿ ವಾಸವಿದ್ದೇನೆ.

11. ಪ್ರತಿವಾದಿ ಧ್ರಾಕ್ಷಾಯಣಿಯ ಪತಿಯ ಹೆಸರು ಜಯಣ್ಣ ಎಂದರೆ ಸರಿ. ಅವರು ಬಿಲ್ಡಿಂಗ್ ಕಾಂಟ್ರಾಕ್ಟರ್ ಎಂದರೆ ಸರಿ. ನೀವು ಹಾಗೂ ಅವರ ಸ್ನೇಹಿತರು ಎಂದರೆ ಸರಿಯಲ್ಲ, ಅಕ್ಕಪಕ್ಕದವರು ಮಾತ್ರ.

12. ಪ್ರತಿವಾದಿ ಪೂರ್ವ-ಪಶ್ಚಿಮ 20.57 ಮೀಟರ್ ಹಾಗೂ ಉತ್ತರ ದಕ್ಷಿಣ 20.57 ಮೀಟರ್ ಅಳತೆಯ ನಿವೇಶನ ಇದೆ. ಪ್ರತಿವಾದಿ ಜಾಗ ಬಿಡದೇ ಮೇಲೆ ಹೇಳಿದ ಪೂರ್ತಿ ಅಳತೆಯಲ್ಲಿ ಮನೆ ಕಟ್ಟಿರುತ್ತಾರೆ.

13. ಪ್ರತಿವಾದಿಯು ಪಂಚಾಯತಿ ನಿಯಮಾವಳಿಗಳಂತೆ ಪರವಾನಿಗೆ ಪಡೆದು ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

14. ಪ್ರತಿವಾದಿ ಸೆಟ್ ಬ್ಯಾಕ್ ಬಿಡದೇ ಕಟ್ಟಡ ಕಟ್ಟಿರುವ ಬಗ್ಗೆ ನುರಿತ ಇಂಜಿನಿಯರ್ ರಿಂದ ಅಳತೆ ಮಾಡಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ, ಇಲ್ಲ. ಆದರೆ ಕೊಪ್ಪ ಪಂಚಾಯತಿ ಪಿಡಿಓ ವರದಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

15. ನಿಯಮ ಉಲ್ಲಂಘನೆ ಮಾಡಿ ಕಟ್ಟಡ ಕಟ್ಟಿರುತ್ತಾರೆ ಎಂದು ಪಿಡಿಓ ವರದಿ ನೀಡಿರುತ್ತಾರೆ.

16. ನಿಪಿ - 14 ರಲ್ಲಿ ಪ್ರತಿವಾದಿಯ ಸಹಿ ಇಲ್ಲ ಎಂದರೆ ನನಗೆ ಅವರ ಸಹಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

17. ನಿಪಿ - 14 ರಲ್ಲಿರುವ ಸಹಿಗಳು ಯಾರ್ಯಾರದ್ದು ಎಂದರೆ, ನನಗೆ ಗೊತ್ತಿಲ್ಲ.

18. ಪಿಡಿಓ ರವರಿಗೆ ಪ್ರತಿವಾದಿಗೆ ನೀಡಿದ ನೊಟೀಸಿನ ಪ್ರತಿಯನ್ನು ನಿಮಗೆ ನೀಡುವಂತೆ ಲಿಖಿತ ಅರ್ಜಿ ನೀಡಿದ್ದೀರಾ ಎಂದರೆ, ಇಲ್ಲ.

19. ಯಾವುದೇ ಸರ್ಕಾರಿ ದಾಖಲಾತಿ ಪಡೆಯಬೇಕಾದರೆ ಅರ್ಜಿ ನೀಡಿ ಪಡೆಯಬೇಕು ಎಂದರೆ, ನನಗೆ ಗೊತ್ತಿಲ್ಲ.

20. ನಿಪಿ - 14 ನ್ನು ನೀವು ಹಾಗೂ ಪಿಡಿಓ ರವರು ಷರೀಕ್ ಆಗಿ ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ.

21. ಪ್ರತಿವಾದಿಗೆ ಯಾವುದೇ ನೊಟೀಸು ಪಂಚಾಯತಿಯಿಂದ ಬಂದಿಲ್ಲ ಎಂದರೆ ಸರಿಯಲ್ಲ.

22. ಪ್ರತಿವಾದಿಯು ದಿಃ 15.06.2018 ರಂದು ಎನ್. ಸಾತಪ್ಪ ರವರಿಂದ ನೊಂದಾಯಿತ ಕ್ರಯಪತ್ರದ ಮೂಲಕ ಪಡೆದ ಸ್ವತ್ತು ಎಂದರೆ, ಸರಿ.

23. ಸದರಿ ಖರೀದಿ ಮಾಡಿದ ನಂತರ ಪ್ರತಿವಾದಿ ಹೆಸರಿಗೆ ಖಾತೆಯಾಗಿ ಕಟ್ಟಡ ಕಟ್ಟಲು ಸಂಬಂಧಪಟ್ಟ ಪಂಚಾಯತಿಯಿಂದ ಪರವಾನಿಗೆ ಪಡೆದು ಕಟ್ಟಡ ಕಟ್ಟುತ್ತಿದ್ದಾರೆ ಎಂದರೆ, 2 ಅಂತಸ್ತಿಗೆ ಪರವಾನಿಗೆ ಪಡೆದು 4 ಅಂತಸ್ತು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

24. ಪಂಚಾಯತಿಯಿಂದ ಅಧಿಕೃತವಾಗಿ ಪರವಾನಿಗೆ ಪಡೆದು ಮನೆ ಕಟ್ಟುತ್ತಿದ್ದರೂ, ನಿಮ್ಮ ಸ್ನೇಹಿತರಾದ ಅವರ ಪತಿಯಿಂದ ನೀವು ಪಡೆದ ಹಣವನ್ನು ಅವರು ವಾಪಸ್ ಕೇಳಿದ್ದಕ್ಕೆ ಆ ಜಿದ್ದಿಗೋಸ್ಕರ ಈ ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

25. ಪ್ರತಿವಾದಿಯ ಪತಿಯ ವಿರುದ್ಧ ನೀವು ಗಲಾಟೆ ಮಾಡಿರುತ್ತೀರಾ ಎಂದರೆ ಸರಿಯಲ್ಲ, ನಾನು ಕೇಳಲು ಹೋಗಿದ್ದಕ್ಕೆ ಅವರು ಗಲಾಟೆ ಮಾಡಿರುತ್ತಾರೆ. ಆ ಬಗ್ಗೆ ನಾನು ದೂರು ನೀಡಿಲ್ಲ.

26. ನಿಮ್ಮ ವಾದಪತ್ರದಲ್ಲಿ ಹೇಳಿರುವ ಪ್ರಕಾರ ಪ್ರತಿವಾದಿ ನಿಮ್ಮ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ನಿಮ್ಮ ಆಸ್ತಿಗೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ.

27. ಪ್ರತಿವಾದಿ ಕಾನೂನಬದ್ಧವಾಗಿ ಮನೆ ಕಟ್ಟಿ ಸುತ್ತ ಕಂಪೌಂಡ್ ಹಾಕಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲ.

28. ಪ್ರತಿವಾದಿಗೆ ತೊಂದರೆಯಾಗಲಿ ಎಂದು ಈ ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.

29. ನೀವು ಮಧ್ಯಂತರ ತಡೆಯಾಜ್ಞೆ ಕೋರಿ ಹಾಕಿದ ಅರ್ಜಿ ವಜಾ ಆಗಿದೆ ಎಂದರೆ, ಸರಿ. ಸದರಿ ಆದೇಶದ ವಿರುದ್ಧ ನೀವು ಸಲ್ಲಿಸಿದ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ.

30. ಯಾವುದೇ ಹುರುಳು ಇಲ್ಲದೇ ಸುಳ್ಳು ಕಥೆ ಕಟ್ಟಿ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

31. ಯಾವುದೇ ಗಲಾಟೆಯಾಗದೇ ಇದ್ದರೂ, ನಿಮ್ಮ ಜಿದ್ದಿಗೋಸ್ಕರ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಪಿರಿಯಾಪಟ್ಟಣ